ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ನೇಮಕಾತಿ

೩೬೯ (ಜಿಳಲ) ಶ್ರೀ ಕೃಷ್ಣಪ್ಪ (ವರ್ತೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;—

ಅ) ೧೯೮೪-೮೫ನೆ ಸಾಲಿನಲ್ಲಿ ೭೫ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಕರೆಯಲಾಗಿದೆಯೆ ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಇದುವರೆವಿಗೂ ಭರ್ತಿ ಮಾಡದೆ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಇ) ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಹೌದು.

ಆ) ಇಲಾಖೆ ನೇಮಕಾತಿ ಸಮಿತಿಯನ್ನು ಪುನರ್ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದಾದ ನಂತರ ಮೌಖಿಕ ಪರೀಕ್ಷೆ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ

ಇ) ಮಾಡಲಾಗುವುದು.

ರಾಜ್ಯದಲ್ಲಿ ೩೦-೫೦ ಹಾಸಿಗೆಯ ಆಸ್ಪತ್ರೆಗಳಿಗೆ ಕಟ್ಟಡಗಳಿಲ್ಲದ ತಾಲ್ಲೂಕುಗಳು

೩೯೦ (ಜೆಪಿ) ಶ್ರೀ ಸಿ. ಎಂ. ರೇವಣಸಿದ್ದಯ್ಯ (ಶಿರಗುಪ್ಪ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ೩೦-೫೦ ಹಾಸಿಗೆ ಆಸ್ಪತ್ರೆ ಕಟ್ಟಡಗಳೆಷ್ಟು ತಾಲ್ಲೂಕುಗಳೆಷ್ಟು ಇವೆ ? ಅವು ಯಾವುವು ?

ಆ) ತಾಲ್ಲೂಕು ಕೇಂದ್ರವಿಲ್ಲದ ಕಡೆ ೩೦ ಹಾಸಿಗೆ ಆಸ್ಪತ್ರೆ ಕಟ್ಟಡಗಳೆಷ್ಟು ಇವೆ ? ಆ ಸ್ಥಳಗಳಾವುವು ?

ಇ) ೧೯೮೯-೯೦ರಲ್ಲಿ ಶಿರಗುಪ್ಪ ಕಟ್ಟಡಕ್ಕೆ ೫೦ ಹಾಸಿಗೆ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸುವ ಯೋಜನೆ ಏನಾದರೂ ಇದೆಯೆ ?

೧೯೮೯-೯೦ಕ್ಕೆ ಶಿರಗುಪ್ಪ ತಾಲ್ಲೂಕು ಶಿರಿಗೇರಿಗೆ ಪಿ.ಹೆಚ್.ಸಿ. ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲಾಗುವುದೇ ?

ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೪೧ (ಸ್ಥಳಗಳ ಪಟ್ಟಿಯನ್ನು ಲಗತ್ತಿಸಿದೆ).

ಆ) ೧೫ (ಸ್ಥಳಗಳ ಪಟ್ಟಿಯನ್ನು ಲಗತ್ತಿಸಿದೆ)

ಇ) ಶಿರಗುಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ೩೦ ಹಾಸಿಗೆ ಆಸ್ಪತ್ರೆ ಕಟ್ಟಡ ನಿರ್ಮಿಸುವ ಬಗ್ಗೆ ಜಿಲ್ಲಾಪರಿಷತ್ತಿನಿಂದ ೧೯೮೯-೯೦ ಆಯವ್ಯಯದಲ್ಲಿ ಸಾಕಷ್ಟು ಅನುದಾನವನ್ನು ಒದಗಿಸಿ ಪ್ರಸ್ತಾವನೆ ಬಂದರೆ ಆ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುವುದು.

ಈ) ಜಿಲ್ಲಾ ಪರಿಷತ್ತಿನವರು ೧೯೮೯-೯೦ನೇ ಸಾಲಿಗೆ ಶಿರಿಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ಸಾಕಷ್ಟು ಅನುದಾನವನ್ನು ಒದಗಿಸಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.